ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ
ಸಿಸಿ ಸಂಃ **1052/2021**

| | | |
|---|---|---|
| ಸಾಕ್ಷಿಯ ಹೆಸರುಃ | ಶಿವಾನಂದ ಸ್ವಾಮಿ | ಫ್ರಾಸಾಃಃ 8 |
| ತಂದೆ ಹೆಸರುಃ | ಆರ್. ಬಿ. ಬೆನ್ನೂರುಮಠ | ಚಾಸಾಃಃ 18 |
| ವಯಸ್ಸುಃ | 65 ವರ್ಷ | ಪ್ರಮಾಣೀಕರಿಸಿದ ದಿಃ 19.09.2025 |
| ಉದ್ಯೋಗಃ | ವೈದ್ಯಕೀಯ ದಾಖಲಾಧಿಕಾರಿ, ಜೆ.ಎಸ್.ಎಸ್. ಆಸ್ಪತ್ರೆ ಮೈಸೂರು | |
| ವಾಸಸ್ಥಳಃ | ಮೈಸೂರು | |

ಮುಖ್ಯ ವಿಚಾರಣೆಃ ಸಸಅ ರಿಂದಃ

ನಾನು ಜೆ.ಎಸ್.ಎಸ್. ಆಸ್ಪತ್ರೆ ಮೈಸೂರಿನಲ್ಲಿ ಕಳೆದ 36 ವರ್ಷಗಳಿಂದ ದಾಖಲಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ.

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 29.08.2019 ರಂದು ಪಿರಿಯಾಪಟ್ಟಣ ಪೊಲೀಸ್ ಠಾಣೆಯಿಂದ ನಿವೇದನೆ ನೀಡಿ ಶಿವಕುಮಾರ ರವರ ಎಂ.ಎಲ್.ಸಿ ಮತ್ತು ಕೇಸ್ ಶೀಟ್ ನ ದೃಢೀಕೃತ ಪ್ರತಿ ನೀಡುವಂತೆ ಕೋರಿಕೊಂಡಿದ್ದರು.
2. ಆ ಪ್ರಕಾರ ನಾನು ಶಿವಕುಮಾರ ರವರ ಎಂ.ಎಲ್.ಸಿ ಮತ್ತು ಕೇಸ್ ಶೀಟ್ ನ ದೃಢೀಕೃತ ಪ್ರತಿಗಳನ್ನು ನೀಡಿರುತ್ತೇನೆ.
3. ಸಾಕ್ಷಿಯು ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ಹಾಗೂ ಕೇಸ್ ಸೀಟನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ - 21 ಮತ್ತು ನಿಪಿ - 22 ಎಂದು ಗುರುತಿಸಿದ್ದು, ದೃಢೀಕರಿಸಿದ ಬಗ್ಗೆ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ - 21(ಬಿ) ಮತ್ತು ನಿಪಿ - 22(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರುಗಳಿಂದ

1. ನನಗೆ ಪೊಲೀಸರಿಂದ ಯಾವುದೇ ನಿವೇದನೆ ಬಂದಿಲ್ಲ ಹಾಗೂ ನಾನು ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

2. ನೀವು ಯಾವುದೇ ದಾಖಲೆಗಳನ್ನು ದೃಢೀಕರಿಸಿಲ್ಲ ಎಂದರೆ ಸರಿಯಲ್ಲ.
3. ಈ ಪ್ರಕರಣದಲ್ಲಿ ನಾನು ಯಾವುದೇ ದಾಖಲಾತಿ ನೀಡದೇ ಇದ್ದರೂ ಪೊಲೀಸರ ಮಾತು ಕೇಳಿ, ಪಿರ್ಯಾದುದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಪಿರಿಯಾಪಟ್ಟಣ